## ಇ-ಹರಾಜಿನ ಸಾಮಾನ್ಯ ಷರತ್ತು ಮತ್ತು ನಿಯಮ-ನಿಬಂಧನೆಗಳು ಈ ಕೆಳಕಂಡಂತೆ ಇರುತ್ತವೆ.

1. ಹರಾಜಿನಲ್ಲಿ ಭಾಗವಹಿಸುವವರು ಭಾರತೀಯ ಪ್ರಜೆಯಾಗಿರಬೇಕು.
2. ವಿಳಾಸದ ಸಾಬೀತಿಗಾಗಿ ಕೆಳಕಂಡ ಯಾವುದಾದರು ಒಂದು ದಾಖಲೆಯನ್ನು ಇ–ಹರಾಜಿನ ಪೋರ್ಟಲ್‌ನಲ್ಲಿ Upload ಮಾಡಬೇಕು [ಗೆಜೆಟೆಡ್ ಅಧಿಕಾರಿ / ನೋಟರಿಯಿಂದ / ಭಾರತೀಯ ಅನಿವಾಸಿಯಾಗಿದ್ದಲ್ಲಿ (ಎನ್.ಆರ್.ಐ) ಎಂಬೆಸ್ಸಿ ಕಛೇರಿಯಿಂದ ದೃಢೀಕೃತಗೊಂಡಿರಬೇಕು]. ಅ) ಮತದಾರರ ಗುರುತಿನ ಚೀಟಿ, ಆ) ವಾಹನ ಚಾಲನೆಯ ಪರವಾನಗಿ, ಇ) ಪಾಸ್ ಪೋರ್ಟ್, ಈ) ವಿಶಿಷ್ಟ ಗುರುತಿನ ಸಂಖ್ಯೆ (ಆಧಾರ್).
3. ಪ್ಯಾನ್ ಕಾರ್ಡ್‌ನ್ನು ಕಡ್ಡಾಯವಾಗಿ ಇ–ಹರಾಜಿನ ಪೋರ್ಟಲ್‌ನಲ್ಲಿ Upload ಮಾಡಬೇಕು [ಗೆಜೆಟೆಡ್ ಅಧಿಕಾರಿ / ನೋಟರಿಯಿಂದ /ಭಾರತೀಯ ಅನಿವಾಸಿಯಾಗಿದ್ದಲ್ಲಿ (ಎನ್.ಆರ್.ಐ) ಎಂಬೆಸ್ಸಿ ಕಛೇರಿಯಿಂದ ದೃಢೀಕೃತಗೊಂಡಿರಬೇಕು].
4. ಸಹಿ ಮತ್ತು ಭಾವಚಿತ್ರದ ಗುರುತನ್ನು ಇ–ಹರಾಜಿನ ಪೋರ್ಟಲ್‌ನಲ್ಲಿ Upload ಮಾಡಬೇಕು. ಇದಕ್ಕೆ ನಿಗದಿಪಡಿಸಿದ ನಮೂನೆಯನ್ನು ಡೌನ್‌ಲೋಡ್ ಮಾಡಿಕೊಳ್ಳಬೇಕು [ಗೆಜೆಟೆಡ್ ಅಧಿಕಾರಿ / ನೋಟರಿಯಿಂದ/ ಭಾರತೀಯ ಅನಿವಾಸಿಯಾಗಿದ್ದಲ್ಲಿ (ಎನ್.ಆರ್.ಐ) ಎಂಬೆಸ್ಸಿ ಕಛೇರಿಯಿಂದ ದೃಢೀಕೃತಗೊಂಡಿರಬೇಕು].
5. ಹರಾಜು ಖರೀದಿದಾರರು ಸರಿಯಾದ ಇ–ಮೇಲ್ ವಿಳಾಸ, ಮೊಬೈಲ್ ಸಂಖ್ಯೆ ಮತ್ತು ಸ್ಥಿರ ದೂರವಾಣಿಯನ್ನು (ಲ್ಯಾಂಡ್ ಲೈನ್) ಇ–ಹರಾಜಿನಲ್ಲಿ ಭಾಗವಹಿಸುವಾಗ ನಮೂದಿಸಬೇಕು. ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಹೆಸರು ನೋಂದಾಯಿಸಿರುವ ಬಿಡ್‌ದಾರರು ಅಂತಿಮವಾಗಿರುತ್ತಾರೆ ಮತ್ತು ನಿವೇಶನವನ್ನು ಬೇರೆ ಯಾವುದೇ ಹೆಸರಿಗೆ ವರ್ಗಾಯಿಸುವುದಿಲ್ಲ.
6. **ಅಪ್ರಾಪ್ತ ವಯಸ್ಕರು / ಗಣಕಯಂತ್ರದ ಜ್ಞಾನ (Computer Knowledge) ಇಲ್ಲದೇ ಇರುವವರು ತಮ್ಮ ಪಾಲಕರ / ಹತ್ತಿರದ ಸ್ನೇಹಿತರ ಮೂಲಕ ಇ–ಹರಾಜಿನಲ್ಲಿ ಭಾಗವಹಿಸಬಹುದು. ಇ–ಹರಾಜಿನಲ್ಲಿ ಭಾಗವಹಿಸುವಾಗ ಯಾರು ನಿವೇಶನವನ್ನು ಖರೀದಿಸುತ್ತಾರೆಯೋ ಅವರ ಹೆಸರನ್ನು ಮಾತ್ರ ನಮೂದಿಸಿ, ಅವರಿಗೆ ಸಂಬಂಧಿಸಿದ ದಾಖಲೆಗಳನ್ನು ಸಲ್ಲಿಸಬೇಕು / ಇ–ಹರಾಜಿನ ಪೋರ್ಟಲ್‌ನಲ್ಲಿ Upload ಮಾಡಬೇಕು.**
7. ಇ–ಹರಾಜಿನ ಮೂಲಕ ನಿವೇಶನವನ್ನು ಖರೀದಿಸುವವರು ತಮ್ಮ ಹೆಸರಿನೊಂದಿಗೆ ಜಂಟಿ ನೋಂದಣಿಗಾಗಿ ಹೆಸರನ್ನು ಸೇರ್ಪಡೆ ಮಾಡಲು ಇಚ್ಛಿಸುವವರು ಕೇವಲ "ರಕ್ತ ಸಂಬಂಧಿಗಳನ್ನು ಮಾತ್ರ" [ಗಂಡ / ಹೆಂಡತಿ, ಗಂಡು ಮಕ್ಕಳು, ಅವಿವಾಹಿತ ಹೆಣ್ಣುಮಕ್ಕಳು] ಸೇರಿಸಬಹುದು. ಜಂಟಿ ನೋಂದಣಿಗಾಗಿ ಸೇರ್ಪಡೆ ಮಾಡುತ್ತಿರುವ ಹೆಸರಿನವರು ತಮಗೆ ಏನಾಗಬೇಕು ಎಂಬುದನ್ನು ಸಹ ನಮೂದಿಸಿ, ಇದಕ್ಕೆ ಸಂಬಂಧಪಟ್ಟ ದಾಖಲೆಗಳನ್ನೂ ಸಹ ಸಲ್ಲಿಸಬೇಕು/ ಇ–ಹರಾಜಿನ ಪೋರ್ಟಲ್‌ನಲ್ಲಿ Upload ಮಾಡಬೇಕು.
8. ಪಾಲುದಾರ ಸಂಸ್ಥೆಯು ಹರಾಜಿನಲ್ಲಿ ಭಾಗವಹಿಸಬಹುದಾಗಿದೆ. ಹೀಗೆ ಭಾಗವಹಿಸುವ ಪಾಲುದಾರ ಸಂಸ್ಥೆಯು ಹರಾಜಿನಲ್ಲಿ ಭಾಗವಹಿಸುವ ಮುನ್ನ ತನ್ನ ಪಾಲುದಾರಿಕೆ ಸಂಸ್ಥೆಯ ನೋಂದಾವಣೆಯನ್ನು ಭಾರತ ದೇಶದಲ್ಲಿ ಮಾಡಿಕೊಂಡಿರಬೇಕು.
9. ಪ್ರತಿ ನಿವೇಶನಕ್ಕೆ ಇ.ಎಂ.ಡಿ ಮೊತ್ತ ರೂ.4.00 ಲಕ್ಷಗಳನ್ನು (ರೂ.ನಾಲ್ಕು ಲಕ್ಷ ಮಾತ್ರ) ನಿಗದಿಗೊಳಿಸಿದ್ದು, ಸದರಿ ಮೊತ್ತವನ್ನು ಹಾಗೂ ಇ–ಹರಾಜಿನ ಶುಲ್ಕವನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ನಲ್ಲಿರುವಂತೆ ಪಾವತಿ ಮಾಡಬೇಕು. ಆದರೆ ಸದರಿ ಮೊತ್ತವನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಖಾತೆಗೆ ಪಾವತಿಸಬಾರದು.
10. ಹರಾಜು ನಿವೇಶನಗಳಿಗೆ ಸಂಬಂಧಿಸಿದ ಎಲ್ಲಾ ಕಾನೂನು ಪ್ರಕರಣಗಳು ಬೆಂಗಳೂರಿನ ನ್ಯಾಯಾಲಯದ ವ್ಯಾಪ್ತಿಗೆ ಒಳಪಡುತ್ತವೆ.
11. ಇ–ಹರಾಜು ಕೊನೆಯ ಕ್ಷಣದಲ್ಲಿ ಬರುತ್ತಿರುವ ಬಿಡ್ಡುಗಳಿಗೆ ಡೆಲ್ಟಾ ಟೈಮ್ ಐದು ನಿಮಿಷಗಳ ಕಾಲ ವಿಸ್ತರಣೆಯಾಗುತ್ತದೆ.
12. ಯಾವುದೇ ಕಾರಣ ನೀಡದೇ ಹರಾಜು ಅವಧಿಯ ಯಾವುದೇ ಸಮಯದಲ್ಲಿ ಹರಾಜಿಗೆ ಪ್ರಕಟಿಸಿದ ನಿವೇಶನಗಳನ್ನು ಹಿಂಪಡೆಯುವ ಹಕ್ಕನ್ನು ಬಿಡಿಎ ಕಾಯ್ದಿರಿಸಿಕೊಂಡಿದೆ.
13. ಯಾವುದೇ ಕಾರಣ ನೀಡದೇ ಯಶಸ್ವಿ ಬಿಡ್ಡುದಾರರ ಬಿಡ್ಡನ್ನು ಪುರಸ್ಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಬಿಡಿಎ ಕಾಯ್ದಿರಿಸಿಕೊಂಡಿದೆ.
14. ಯಶಸ್ವಿ ಬಿಡ್ಡುದಾರರಿಗೆ / ಅತಿ ಹೆಚ್ಚಿನ ಬಿಡ್ಡುದಾರರಿಗೆ ನಿವೇಶನದ ಒಟ್ಟು ಮೌಲ್ಯದ ಪೈಕಿ 25% ರಷ್ಟು ಮೌಲ್ಯದಲ್ಲಿ ಇ.ಎಂ.ಡಿ ಮೊತ್ತ ರೂ.4.00 ಲಕ್ಷ ಕಡಿತಗೊಳಿಸಿ, ಬಾಕಿ ಮೌಲ್ಯವನ್ನು ಇ–ಹರಾಜು ಮುಕ್ತಾಯಗೊಂಡ ಅವಧಿಯ 72 ಘಂಟೆಯೊಳಗಾಗಿ (ಬ್ಯಾಂಕ್ ರಜೆಗಳನ್ನು ಹೊರತು ಪಡಿಸಿ) ಕೆಳಕಂಡ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಬ್ಯಾಂಕ್ ಖಾತೆಗೆ ಪಾವತಿ ಮಾಡಿ, ಚಲನ್ ಅನ್ನು ಆರ್ಥಿಕ ಶಾಖೆಯ ಲೆಕ್ಕಾಧಿಕಾರಿಯವರ ವಿಭಾಗಕ್ಕೆ ('ಡಿ' ಬ್ಲಾಕ್, 2ನೇ ಮಹಡಿ, ರೂಮ್.ನಂ.308) ನೀಡುವಂತೆ ಇ–ಮೇಲ್ ಮುಖಾಂತರ ಸೂಚನಾ ಪತ್ರವನ್ನು (Advice Letter) ಕಳುಹಿಸಲಾಗುವುದು.

   ಒಂದು ವೇಳೆ ಸೂಚನಾ ಪತ್ರವು (Advice Letter) ತಲುಪದೇ ಇದ್ದಲ್ಲಿ, ಹರಾಜು ನಿವೇಶನದಾರರೇ ಶೇ.25 ರಷ್ಟು ಮೌಲ್ಯವನ್ನು ಲೆಕ್ಕಾಚಾರ ಮಾಡಿ, ಮೇಲ್ಕಂಡಂತೆ ನಿಗದಿತ ಅವಧಿಯೊಳಗೆ ಪಾವತಿಸಬೇಕು ಅಥವಾ ಪ್ರಾಧಿಕಾರದ ಕೇಂದ್ರ ಕಛೇರಿಗೆ ಬಂದು ಸೂಚನಾ ಪತ್ರವನ್ನು ಪಡೆದು, ಮೇಲ್ಕಂಡಂತೆ ನಿಗದಿತ ಅವಧಿಯೊಳಗೆ ಪಾವತಿಸಬೇಕು.

   **ಬ್ಯಾಂಕ್‌ನ ಹೆಸರು :– ಕೆನರಾ ಬ್ಯಾಂಕ್, ಬಿಡಿಎ ಸಂಕೀರ್ಣ ಶಾಖೆ, ಕುಮಾರಕೃಪಾ ಪಶ್ಚಿಮ, ಬೆಂಗಳೂರು–560020**
   **ಉಳಿತಾಯ ಖಾತೆಯ ಹೆಸರು :– ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು**
   **ಉಳಿತಾಯ ಖಾತೆ ಸಂಖ್ಯೆ :– 2828101053014 ಐ.ಎಫ್.ಎಸ್.ಸಿ ಕೋಡ್:– CNRB0002828**
   **ಪಾವತಿಯ ವಿಧಾನ :– ಆರ್.ಟಿ.ಜಿ.ಎಸ್ / ಎನ್.ಇ.ಎಫ್.ಟಿ**
15. ಯಶಸ್ವಿ ಬಿಡ್ಡುದರಾರು ಶೇ.25 ರಷ್ಟು ಬಿಡ್ ಹಣವನ್ನು ಪಾವತಿಸಿದ ಬಳಿಕ ಉಳಿದ ಹಣ ಶೇ.75 ಹಣವನ್ನು ಬಿ.ಡಿ.ಎ ಯಿಂದ ಪತ್ರ ತಲುಪಿದ 45 ದಿನಗಳೊಳಗಾಗಿ ಪಾವತಿಸತಕ್ಕದು.
16. ಯಶಸ್ವಿಯಾಗದ ಬಿಡ್ಡುದಾರರಿಗೆ EMD ಹಣ 4 ಲಕ್ಷ ರೂ.ಗಳನ್ನು ಒಂದು ತಿಂಗಳ ಒಳಗಾಗಿ ಅವರ ಖಾತೆಗೆ ಹಿಂತಿರುಗಿಸಲಾಗುವುದು.
17. **ಯಶಸ್ವಿ ಬಿಡ್ಡುದಾರರು / ಅತಿ ಹೆಚ್ಚಿನ ಬಿಡ್ಡುದಾರರು ಇ–ಹರಾಜು ಮುಕ್ತಾಯಗೊಂಡ ಅವಧಿಯ ನಿಗದಿತ 72 ಘಂಟೆಯೊಳಗೆ ನಿವೇಶನದ ಒಟ್ಟು ಮೌಲ್ಯದ ಪೈಕಿ ಶೇ.25 ರಷ್ಟು ಮೌಲ್ಯವನ್ನು ಪ್ರಾಧಿಕಾರದ ಖಾತೆಗೆ ಪಾವತಿ ಮಾಡದೇ ಇದ್ದಲ್ಲಿ ಅಥವಾ ನಿಗದಿತ ಅವಧಿಯ ನಂತರ ಅಂದರೆ ತಡವಾಗಿ ಪಾವತಿಸಿದ್ದಲ್ಲಿ, ಇ.ಎಂ.ಡಿ. ಮೊತ್ತವಾದ ರೂ.4.00 ಲಕ್ಷಗಳನ್ನು ಪ್ರಾಧಿಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಮತ್ತು ನಿವೇಶನವನ್ನು ಮರು ಹರಾಜು ಮಾಡಲಾಗುವುದು.**
18. ಆದಾಯ ತೆರಿಗೆ ಕಾಯ್ದೆ 1961 ರ ಕಲಂ 194 ಐಎ ಪ್ರಕಾರ ಹರಾಜು ನಿವೇಶನದ ಒಟ್ಟು ಮೌಲ್ಯವು ರೂ.50.00 ಲಕ್ಷ ಮೀರಿದ ಪ್ರಕರಣಗಳಲ್ಲಿ, ಹರಾಜು ಖರೀದಿದಾರರು ನಿವೇಶನದ ಒಟ್ಟು ಮೌಲ್ಯದಲ್ಲಿ ಶೇ.1 ರಷ್ಟು ಮೌಲ್ಯವನ್ನು ಕಟಾಯಿಸಿ, ಆದಾಯ ತೆರಿಗೆ ಇಲಾಖೆಗೆ ಪಾವತಿಸತಕ್ಕದ್ದು.
19. ಒಂದು ವೇಳೆ ನಿವೇಶನದ ಅಳತೆಯಲ್ಲಿ ವ್ಯತ್ಯಾಸವಿದ್ದರೆ (ಕಡಿಮೆ/ಹೆಚ್ಚು) ಮೊದಲು ಇ–ಹರಾಜು ಅಧಿಸೂಚನೆ / ಹರಾಜು ನಿವೇಶನದ ಸ್ಥಿರೀಕರಣ ಪತ್ರದನ್ವಯ ನಿವೇಶನದ ಪೂರ್ಣ ಮೌಲ್ಯವನ್ನು (TDS ಹೊರತುಪಡಿಸಿ) ನಿಗದಿತ ಅವಧಿಯೊಳಗೆ ಪಾವತಿಸಬೇಕು. ನಿಗದಿತ ಅವಧಿಯೊಳಗೆ ಪಾವತಿಸದೇ ಇದ್ದಲ್ಲಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಮೂಲೆ, ಮಧ್ಯಂತರ & ವಾಣಿಜ್ಯ ನಿವೇಶನಗಳ ವಿಲೇವಾರಿ) ನಿಯಮ 1984 ರನ್ವಯ ಕ್ರಮ ಕೈಗೊಳ್ಳಲಾಗುವುದು.

   ಒಂದು ವೇಳೆ ನಿವೇಶನದ ಅಳತೆಯಲ್ಲಿ ವ್ಯತ್ಯಾಸವಿದ್ದರೆ (ಕಡಿಮೆ / ಹೆಚ್ಚು):– ನಿವೇಶನದ ಮೌಲ್ಯವನ್ನು ಹೆಚ್ಚಾಗಿ ಪಾವತಿಸಿದ್ದರೆ, ಕಡಿಮೆಯಾದ ವಿಸ್ತೀರ್ಣಕ್ಕೆ ನಿವೇಶನದ ಮೌಲ್ಯವನ್ನು ಬಡ್ಡಿರಹಿತವಾಗಿ ಮರುಪಾವತಿಸಲು ಕ್ರಮ ಕೈಗೊಳ್ಳಲಾಗುವುದು. ಹೆಚ್ಚುವರಿಯಾದ ವಿಸ್ತೀರ್ಣಕ್ಕೆ ಪ್ರಾಧಿಕಾರದಿಂದ ಹರಾಜು ಖರೀದಿದಾರರಿಗೆ ಬರೆಯುವ ಪತ್ರದಂತೆ ನಿವೇಶನದ ಮೌಲ್ಯವನ್ನು ಪಾವತಿಸಬೇಕು. ವಿಸ್ತೀರ್ಣಗಳಲ್ಲಿ ತಿದ್ದುಪಡಿ ಮಾಡಲು ಬಿಡ್ಡುದಾರರು ಮೊದಲು ಸಂಪೂರ್ಣ ಮೊತ್ತವನ್ನು ಪಾವತಿಸಬೇಕು, ಯಾವುದಾದರು ಇದ್ದಲ್ಲಿ.
20. ಬಿಡ್ಡುದಾರರು/ಹರಾಜು ಖರೀದಿದಾರರು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಮೂಲೆ, ಮಧ್ಯಂತರ & ವಾಣಿಜ್ಯ ನಿವೇಶನಗಳ ವಿಲೇವಾರಿ) ನಿಯಮ 1984 ನ್ನು ಪಾಲಿಸಬೇಕಾಗುತ್ತದೆ (ಇ–ಹರಾಜಿನ ದಾಖಲೆಯ ಭಾಗವಾಗಿ ಈ ದಾಖಲೆಯನ್ನು ಲಗತ್ತಿಸಲಾಗಿದೆ).
21. ಇ–ಹರಾಜಿನಲ್ಲಿ ಭಾಗವಹಿಸುವ ವಿಧಾನಗಳನ್ನು ತಿಳಿಯಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಕೇಂದ್ರ ಕಛೇರಿಯನ್ನು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು. ಹರಾಜಿನ ವಿಧಾನ ತಿಳಿಸುವ ಸಮಯದಲ್ಲಿ ಬಿಡಿಎ, ಬಿಡ್ಡುದಾರರ ಪರವಾಗಿ ಬಿಡ್ ಮಾಡುವುದಿಲ್ಲ.
22. ಇನ್ನಿತರೆ ಸಾಮಾನ್ಯ ಷರತ್ತು ಮತ್ತು ನಿಯಮ–ನಿಬಂಧನೆಗಳಿಗೆ ನಮ್ಮ ವೆಬ್‌ಸೈಟ್:**www.bdabangalore.org** ಗೆ ಭೇಟಿ ನೀಡಿ.
23. ಇ–ಹರಾಜಿನಲ್ಲಿ ಭಾಗವಹಿಸುವಾಗ, ಬಿಡ್ ಮೊತ್ತವು ಮೂಲ ದರಕ್ಕಿಂತ 10% ಹೆಚ್ಚಾಗಿರಬೇಕು. ಅಂದರೆ 108 $m^2$ ನಿವೇಶನದ ವಿಸ್ತೀರ್ಣದ ಮೂಲ ದರ ರೂ. 45,000/$m^2$ ಆಗಿರುತ್ತದೆ. ಬಿಡ್‌ದಾರರು ರೂ. 45,000x1.1= ರೂ. 49,500/$m^2$ ಕ್ಕಿಂತ ಹೆಚ್ಚು ಕೋಟ್ ಮಾಡಬೇಕು (ರೂ. 49,500 ಕೋಟ್ ಮಾಡಿದರೆ ಅದನ್ನು ತಿರಸ್ಕರಿಸಲಾಗುವುದು). ಆದಾಗ್ಯೂ, ಯಾವುದೇ ಕಾರಣ ನೀಡದೇ ಬಿಡ್ಡನ್ನು ಪುರಸ್ಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಬಿಡಿಎ ಕಾಯ್ದಿರಿಸಿಕೊಂಡಿದೆ.
24. ನಿವೇಶನಗಳನ್ನು "ಎಲ್ಲಿ ಹೇಗಿದೆಯೋ ಅದೇ ಆಧಾರದ ಮೇಲೆ" ಹರಾಜು ಮಾಡಲಾಗುತ್ತದೆ. ನಿವೇಶನಗಳ ಬದಲಾವಣೆಗೆ ಯಾವುದೇ ಅವಕಾಶವಿರುವುದಿಲ್ಲ.
25. ಇ–ಹರಾಜು ನಿವೇಶನಗಳಿಗೆ ಕನಿಷ್ಠ 2 ಬಿಡ್‌ದಾರರು ಇರಬೇಕು. ಒಂದೇ ಬಿಡ್ಡರ್ ಅನ್ನು ತಿರಸ್ಕರಿಸಲಾಗುತ್ತದೆ.
26. ಬಿಡ್ದಾರರು ತಮ್ಮ ಸ್ವಂತ ಬ್ಯಾಂಕ್ ಖಾತೆಯಿಂದ ಮಾತ್ರ ಮೊತ್ತವನ್ನು ಪಾವತಿಸಬೇಕು.
27. ಹರಾಜು ನಿವೇಶನಗಳ ಜಿಯೋ ಟ್ಯಾಗ್ ಲೊಕೇಷನ್ ಅನ್ನು ಗುರುತಿಸುವಿಕೆಗೆಂದು ಉಲ್ಲೇಖಿಸಲಾಗಿದೆ. ಇದಕ್ಕೆ ಸಂಬಂಧಿಸಿದಂತೆ ಯಾವುದೇ ವ್ಯತ್ಯಾಸಗಳಿದ್ದಲ್ಲಿ ಯಾವುದೇ ಕ್ಲೈಮ್ ಅನ್ನು ಪರಿಗಣಿಸಲಾಗುವುದಿಲ್ಲ.
28. ಬಿಡ್ಡಿಂಗ್ ಸಮಯದಲ್ಲಿ, ಅದೇ ನಿವೇಶನಕ್ಕೆ ಅಡ್ಡಹೆಸರುಗಳ ಯಾವುದೇ ನಕಲು ಇದ್ದರೆ, ಅಂತಹ ಬಿಡ್ ಅನ್ನು ಯಾವುದೇ ಕಾರಣಗಳನ್ನು ನೀಡದೆ ತಿರಸ್ಕರಿಸಲಾಗುತ್ತದೆ.

**ಬಿಡ್‌ದಾರರು ಬಿಡ್ ಮಾಡುವ ಮೊದಲು ಎಲ್ಲಾ ನಿಯಮಗಳು ಮತ್ತು ಷರತ್ತುಗಳನ್ನು ಓದಬೇಕು ಮತ್ತು ಅದರ ಪ್ರಕಾರ ಭಾಗವಹಿಸಬೇಕು.**

**ಇ–ಹರಾಜಿನ ಇತರೆ ಮಾಹಿತಿ ಮತ್ತು ನಿಯಮ ನಿಬಂಧನೆಗಳಿಗೆ https://kppp.karnataka.gov.in ಲಾಗಾನ್ ಆಗಿ**


**ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ**
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು–560 020.

ಬಿಡಿಎ ನಿವೇಶನ ವಿವರಗಳಿಗೆ ಸಂಬಂಧಿಸಿದಂತೆ 080–23368435 / 23368036 ಹಾಗೂ
ಇ–ಪ್ರೊಕ್ಯೂರ್‌ಮೆಂಟ್‌ನ ತಾಂತ್ರಿಕ ವಿಚಾರಣೆಗೆ ಸಂಬಂಧಿಸಿದಂತೆ 080–46010000 / 22631200 ಸಂಪರ್ಕಿಸಿ

ಸಹಿ/ –
ಅಭಿಯಂತರ ಸದಸ್ಯರು